## ಹರಿಕಥಾಮೃತಸಾರ - ೧೩

## ನಾಮಸ್ಮರಣ ಸಂಧಿ

ಹರಿಕಥಾಮೃತಸಾರ ಗುರುಗಳ । ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥

ಮಕ್ಕಳಾಡಿಸುವಾಗ ಮಡದಿಯೊ।ಳಕ್ಕರದಿ ನಲಿವಾಗ ಹಯ ಪ ।
ಲ್ಲಕಿ ಗಜ ಮೊದಲಾದ ವಾಹನಗಳೇರಿ ಮೆರೆವಾಗ ॥
ಬಿಕ್ಕುವಾಗಾಕಳಿಸುತಲಿ ದೇ।ವಕ್ಕಿತನಯನ ನೆನೆವುತಿಹ ನರ ।
ಸಿಕ್ಕನ ಯಮದೂತರಿಗೆ ಆವಾವಲ್ಲಿ ನೋಡಿದರು ॥ ॥೧೩-೦೧॥

ಸರಿತುಪ್ರವಹಗಳಲ್ಲಿ ದಿವ್ಯಾಂ।ಬರದಿ ಪುತ್ರಾದಿಯಲಿ ಹರ್ಷಾ ।
ಮರ್ಷ ವಿಸ್ಮೃತಿಯಿಂದಲಾಗಲಿ ಒಮ್ಮೆ ಬಾಯ್ದೆರೆದು ॥
ಹರಿ ಹರೀ ಹರಿಯೆಂಬ ಎರಡಕ್ಷರ ನುಡಿದಮಾತ್ರದಲಿ ದುರಿತಗ ।
ಳಿರದೆ ಪೋಪವು ತೂಲರಾಶಿಯೊಳನಲ ಪೊಕ್ಕಂತೆ ॥ ॥೧೩-೦೨॥

ಮಲಗುವಾಗಲಿ ಏಳುವಾಗಲಿ । ಕುಳಿತು ಮಾತಾಡುತಲಿ ಮನೆಯೊಳು ।
ಕೆಲಸಗಳ ಮಾಡುತಲಿ ಮೈದೊಳೆವಾಗ ಮೆಲುವಾಗ ॥
ಕಲುಷದೂರನ ಸಕಲಾವಿಲಿ ।ತಿಳಿಯೆ ತತ್ತನ್ನಾಮರೂಪವ ।
ಬಳಿಯಲಿಪ್ಪನು ಒಂದರೇಕ್ಷಣ ಬಿಟ್ಟಗಲನವರ ॥ ॥೧೩-೦೩॥

ಆವ ಕುಲದವನಾದರೇನಿ।ನ್ನಾವ ದೇಶದೊಳಿದ್ದರೇನಿ ।
ನ್ನಾವ ಕರ್ಮವಮಾಡಲೇನಿನ್ನಾವ ಕಾಲದಲಿ ॥
ಶ್ರೀವರನ ಸರ್ವತ್ರದಲಿ ಸಂ।ಭಾವಿಸುತ ಪೂಜಿಸುತ ಮೋದಿಪ ।
ಕೋವಿದರಿಗುಂಟೇನೊ ಭಯದುಃಖಾದಿದ್ವಂದ್ವಗಳು ॥ ॥೧೩-೦೪॥

ವಾಸುದೇವನ ಗುಣಸಮುದ್ರದೊ।ಳೀಸಬಲ್ಲವ ಭವಸಮುದ್ರಾ ।
ಯಾಸವಿಲ್ಲದೆ ದಾಟುವನು ಶೀಘ್ರದಲಿ ಜಗದೊಳಗೆ ॥
ಬೇಸರದೆ ದುರ್ವಿಷಯಗಳಅಭಿ।ಲಾಷೆಯಲಿ ಬಳಲುವವ ನಾನಾ ।
ಕ್ಲೇಶಗಳನನುಭವಿಪ ಭಕ್ತಿಸುಮಾರ್ಗ ಕಾಣದಲೆ ॥ ॥೧೩-೦೫॥

ಸ್ನಾನ ಜಪ ದೇವಾರ್ಚನೆಯು ವ್ಯಾ।ಖ್ಯಾನ ಭಾರತಮುಖ ಮಹೊಪಪು ।
ರಾಣ ಕಥೆಗಳ ಪೇಳಿ ಕೇಳಿದರೇನು ದಿನದಿನದಿ ॥
ಜ್ಞಾನಕರ್ಮೇಂದ್ರಿಯಗಳಿಂದೇ।ನೇನು ಮಾಡುವ ಕರ್ಮಗಳು ಲ ।
ಕ್ಷ್ಮೀನಿವಾಸನ ಪೂಜೆಯೆಂದರ್ಪಿಸದ ಮಾನವನು ॥ ॥೧೩-೦೬॥

ದೇವಗಂಗೆಯೊಳಿಪ್ಪವಗೆ ದುರಿತಾವಳಿಗಳುಂಟೇ ವಿಚಾರಿಸೆ |
ಪಾವುಗಳ ಭಯವುಂಟೆ ವಿಹಗಾಧಿಪನ ಮಂದಿರದಿ ||
ಜೀವಕರ್ತೃತ್ವವನು ಮರೆದು ಪರಾಮರೇಶನೆ ಕರ್ತೃ ಎಂದರೆ |
ದಾವ ಕರ್ಮವ ಮಾಡಿದರು ಲೇಪಿಸವು ಕರ್ಮಗಳು || ||೧೩-೦೭||

ಏನು ಮಾಡುವ ಪುಣ್ಯ ಪಾಪಗಳಾನೆ ಮಾಡುವೆನೆಂಬುವಾಧಮ |
ಹೀನಕರ್ಮಕೆ ಪಾತ್ರನಾ ಪುಣ್ಯಕ್ಕೆ ಹರಿಯೆಂಬ ||
ಮಾನವನು ಮಧ್ಯಮನು ದ್ವಂದ್ವಕೆ | ಶ್ರೀನಿವಾಸನೆ ಕರ್ತೃವೆಂದು ಸ |
ದಾನುರಾಗದಿ ನೆನೆದು ಸುಖಿಸುವರೇ ನರೋತ್ತಮರು || ||೧೩-೦೮||

ಈ ಉಪಾಸನೆಗೈವರೊಳೆಯೊಳು | ದೇವತೆಗಳಲ್ಲದಲಿ ನರರ |
ಲ್ಲಾವಬಗೆಯಿಂದಾದರಿವರರ್ಚನೆಯು ಹರಿಪೂಜೆ ||
ಕೇವಲ ಪ್ರತಿಮೆಗಳೆನಿಪರು ರಮಾಪಿಸೋದಗೆ ಇವರನುಗ್ರಹ |
ಮೇ ಪರಾನುಗ್ರಹವೆನಿಸುವುದು ಮುಕುತಿಯೋಗ್ಯರಿಗೆ || ||೧೩-೦೯||

ತನುವೆ ನಾನೆಂಬುವನು ಸತಿಸುತ | ಮನೆಧನಾದಿಗಳೆನ್ನದೆಂಬುವ |
ದ್ಯುನದಿ ಮೊದಲಾದುದಕಗಳೆ ಸತ್ತೀರ್ಥವೆಂಬುವನು ||
ಅನಲಲೋಹಾದಿಪ್ರತೀಕಾರ್ಚನವೆ ದೇವರ ಪೂಜೆ ಸುಜನರೆ |
ಮನುಜರಹುದೆಂಬುವನು ಗೋಖರನೆನಿಪ ಬುಧರಿಂದ || ||೧೩-೧೦||

ಅನಲ ಸೋಮಾರ್ಕೆಂದು ತಾರಾವನಿ ಸುರಾಪಗ ಮುಖ್ಯ ತೀರ್ಥಗ |
ಅನಿಲ ಗಗನಮನಾದಿ ಇಂದ್ರಿಯಗಳಿಗೆ ಅಭಿಮಾನಿ ||
ಎನಿಪ ಸುರರ ವಿಪಶ್ಚಿತರ ಸನ್ಮನದಿ ಭಜಿಸದಲಿಪ್ಪವರ ಪಾ |
ವನವ ಮಾಡರು ತಮ್ಮ ಪೂಜೆಯ ಮಾಡಿದರು ಸರಿಯೆ || ||೧೩-೧೧||

ಕಂಡ ಕಾಣದೆ ಮುಟ್ಟಿದರು ಸರಿ | ಕಂಡು ಮುಟ್ಟಲು ದಹಿಸದಿಪ್ಪುದೆ |
ಪುಂಡರೀಕದಳಾಯತಾಕ್ಷನ ವಿಮಲಪದಪದ್ಮ ||
ಬಂಡುಣಿಗಳೆಂದೆನಿಪ ಭಕ್ತರ | ಹಿಂಡುನೋಡಿದ ಮಾತ್ರದಲಿ ತನು |
ದಿಂಡುಗೆಡಹಿದ ನರನ ಪಾವನಮಾಳ್ಪರಾಕ್ಷಣದಿ || ||೧೩-೧೨||

ಈ ನಿಮಿತ್ತ ಪುನಃ ಪುನಃ ಸುಜ್ಞಾನಿಗಳ ಸಹವಾಸ ಮಾಡು ಕು |
ಮಾನವರ ಕೂಡಾಡದಿರು ಲೌಕಿಕಕೆ ಮರುಳಾಗಿ ||
ವೈನತೇಯಾಂಸಗನ ಸರ್ವಸ್ಥಾನದಲಿ ತನ್ನಾಮರೂಪವ |
ಧೇನಿಸುತ ಸಂಚರಿಸು ಇತರಾಲೋಚನೆಯ ಬಿಟ್ಟು || ||೧೩-೧೩||

ಈ ನಳಿನಜಾಂಡದೊಳು ಸರ್ವ|ಪ್ರಾಣಿಗಳೊಳಿದ್ದನವರತ ವಿ |
ಜ್ಞಾನಮಯ ವ್ಯಾಪಾರಗಳ ಮಾಡುವನು ತಿಳಿಸದಲೆ ||
ಏನು ಕಾಣದೆ ಸಕಲ ಕರ್ಮಗ|ಳಾನೆ ಮಾಡುವೆನೆಂಬ ನರನು ಕು |
ಯೋನಿ ಐದುವ ಕರ್ತೃ ಹರಿ ಎಂದವನೆ ಮುಕ್ತನಹ || ||೧೩-೧೪||

ಕಲಿಮಲಾಪಹಳೆನಿಸುತಿಹ ಬಾಂ|ಬೊಳೆಯೊಳಗೆ ಸಂಚರಿಸಿ ಬದುಕುವ |
ಜಲಚರಪ್ರಾಣಿಗಳು ಬಲ್ಲವೆ ತೀರ್ಥಮಹಿಮೆಯನು ||
ಹಲವು ಬಗೆಯಲಿ ಹರಿಯ ಕರುಣಾ|ಬಲದಿ ಬಲ್ಲಿದರಾದ ಬ್ರಹ್ಮಾ
ನಿಲವಿಪೇಶಾದ್ಯಮರರರಿಯರನಂತನಮಲಗುಣ || ||೧೩-೧೫||

ಶ್ರೀ ಲಕುಮಿವಲ್ಲಭನು ಹೃತ್ಕಿ|ಲಾಲಜದೊಳಿದ್ದಖಿಳಚೇತನ |
ಜಾಲವನು ಮೊಹಿಸುವ ತ್ರಿಗುಣದಿ ಬದ್ಧರನು ಮಾಡಿ ||
ಸ್ಥೂಲಕರ್ಮದಿ ರತರ ಮಾಡಿ ಸು|ಲೀಲೆಗಳ ತಿಳಿಸದಲೆ ಭವದಿ ಕು |
ಲಾಲಚಕ್ರದ ತೆರದಿ ತಿರುಗಿಸುತಿಹನು ತಿಳಿಸದಲೆ || ||೧೩-೧೬||

ವೇದ ಶಾಸ್ತ್ರ ವಿಚಾರ ಗೈದು ನಿ|ಷೇಧಕರ್ಮವ ತೊರೆದು ನಿತ್ಯದಿ |
ಸಾಧುಕರ್ಮವ ಮಾಳ್ಪರಿಗೆ ಸ್ವರ್ಗಾದಿಸುಖವೀವ ||
ಐದಿಸುವ ಪಾಪಿಗಳ ನಿರಯವ|ಖೇದಮೊದ ಮನುಷ್ಯರಿಗೆ ದು |
ರ್ವಾದಿಗಳಿಗಂಧಂತಮದಿ ಮಹದುಃಖಗಳನುಣಿಪ || ||೧೩-೧೭||

ನಿರ್ಗುಣೋಪಾಸಕಗೆ ಗುಣಸಂ|ಸರ್ಗದೋಷಗಳೀಯದಲೆ ಆಪ |
ವರ್ಗದಲಿ ಸುಖವಿತ್ತು ಪಾಲಿಸುವನು ಕೃಪಾಸಾಂದ್ರ ||
ದುರ್ಗಮನು ಎಂದೆನಿಪ ತ್ರೈವಿದ್ಯರ್ಗೆ ತ್ರಿಗುಣಾತೀತ ಸಂತತ |
ಸ್ವರ್ಗಭೂನರಕದಲಿ ಸಂಚಾರವನೆ ಮಾಡಿಸುವ || ||೧೩-೧೮||

ಮೂವರೊಳಗಿದ್ದರು ಸರಿಯೆ ಸುಖ|ನೋವುಗಳು ಸಂಬಂಧವಾಗವು |
ಪಾವನಕೆ ಪಾವನ ಪರಾತ್ಪರ ಪೂರ್ಣಸುಖವನಧಿ ||
ಈ ವನರುಹಭವಾಂಡದೊಳು ಸ್ವಕ|ಳೇವರ ತದಾಕಾರಮಾಡಿ ಪ |
ರಾವರೇಶ ಚರಾಚರಾತ್ಮಕ ಲೋಕಗಳ ಪೊರೆವ || ||೧೩-೧೯||

ಈನಿಮಿತ್ತ ನಿರಂತರ ಸ್ವಾ|ಧೀನಕರ್ತೃತ್ವವನು ಮರೆದೇ |
ನೇನು ಮಾಡುವದಿಲ್ಲ ಹರಿ ಒಳಹೊರಗೆ ನೆಲೆಸಿದ್ದು ||
ತಾನೆ ಮಾಡುವನೆಂದರಿದು ಮ|ದ್ದಾನೆಯಂದದಿ ಸಂಚರಿಸು ಪವ |
ಮಾನವಂದಿತ ಒಂದರೇಕ್ಷಣ ಬಿಟ್ಟಗಲ ನಿನ್ನ || ||೧೩-೨೦||

ಹಲವು ಕರ್ಮವ ಮಾಡಿ ದೇಹವ । ಬಳಲಿಸದೆ ದಿನದಿನದಿ ಹೃದಯಾ ।
ಮಲಸದನದಿ ವಿರಾಜಿಸುವ ಹರಿಮೂರ್ತಿಯನೆ ಭಜಿಸು ॥
ತಿಳಿವದೀ ಪೂಜಾಪ್ರಕರಣವ । ಫಲಸುಪುಷ್ಪಾಗ್ರೋದಕ ಶ್ರೀ ।
ತುಲಸಿದಳವರ್ಪಿಸಲು ಒಪ್ಪನು ವಾಸುದೇವ ಸದಾ ॥ ॥೧೩-೨೦॥

ಧರಣಿ ನಾರಾಯಣನು ಉದಕದಿ । ತುರಿಯನಾಮಕ ಅಗ್ನಿಯೊಳು ಸಂ ।
ಕರುಷಣಾಹ್ವಯ ವಾಯುಗ ಪ್ರದ್ಯುಮ್ನನಿರುದ್ಧ ॥
ಇರುತಿಹನು ಆಕಾಶದೊಳು ಮೂರೆರಡು ರೂಪವ ಧರಿಸಿ ಭೂತಗ ।
ಕರೆಸುವನು ತನ್ನಾಮರೂಪದಿ ಪ್ರಜರ ಸಂತೈಪ ॥ ॥೧೩-೨೧॥

ಘನಗತನು ತಾನಾಗಿ ನಾರಾಯಣನು ತನ್ನಾಮದಲಿ ಕರೆಸುವ ।
ವನದ ಗರ್ಭೋದಕದಿ ನೆಲಿಸಿಹ ವಾಸುದೇವ ಸದಾ ॥
ಧ್ವನಿಸಿಡಿಲು ಸಂಕರ್ಷಣನು ಮಿಂಚಿನೊಳು ಶ್ರೀ ಪ್ರದ್ಯುಮ್ನ ವೃಷ್ಟಿಯ ।
ಹನಿಗಳೊಳಗನಿರುದ್ಧನಿಪ್ಪನು ವರುಷನೆಂದೆನಿಸಿ ॥ ॥೧೩-೨೩॥

ಗೃಹ ಕುಟುಂಬ ಧನಾದಿಗಳ ಸನ್ನಹಗಳುಳ್ಳವರಾಗಿ ವಿಹಿತಾ ।
ವಿಹಿತಧರ್ಮ ಸುಕರ್ಮಗಳ ತಿಳಿಯದಲಿ ನಿತ್ಯದಲಿ ॥
ಆಹರ ಮೈಥುನ ನಿದ್ರೆಗೊಳಗಾಗಿಹರು ಸರ್ವಪ್ರಾಣಿಗಳು ಹೃ ।
ದ್ಗುಹನಿವಾಸಿಯನರಿಯದಲಿ ಭವದೊಳಗೆ ಬಳಲುವರು ॥ ॥೧೩-೨೪॥

ಜಡಜಸಂಭವ ಖಗ ಫಣಿಪ ಕಂಜಡೆಯರಿಂದೊಡಗೂಡಿ ರಾಜಿಸು ।
ತಡವಿಯೊಳಗಿಪ್ಪನು ಸದಾ ಗೋಜಾದ್ವಿಜನು ಎನಿಸಿ ॥
ಉಡುಪನಿಂದಭಿವೃದ್ಧಿಗಳ ತಾಕೊಡುತ ಪಕ್ಷಿಮೃಗಾಹಿಗಳ ಕಾ ।
ರೊಡಲ ಕಾವನು ತತ್ತದಾಹ್ವಯನಾಗಿ ಜೀವರನು ॥ ॥೧೩-೨೫॥

ಅಪರಿಮಿತ ಸನ್ಮಹಿಮ ನರಹರಿ । ವಿಪಿನದೊಳು ಸಂತೈಸುವನು ಕಾ ।
ಶ್ಯಪಿಯನಳಿದವ ಸ್ಥಳಗಳಲಿ ಸರ್ವತ್ರ ಕೇಶವನು ॥
ಖಪತಿ ಗಗನದಿ ಜಲಗಳಲಿ ಮಹಾಶಫರನಾಮಕ ಭಕ್ತರನು ನಿ ।
ಷ್ಕಪಟದಿಂದಲಿ ಸಲಹುವನು ಕರುಣಾಳು ದಿನದಿನದಿ ॥ ॥೧೩-೨೬॥

ಕಾರಣಾಂತರ್ಯಾಮಿ ಸ್ಥೂಲವತಾರ ವ್ಯಾಪ್ತಾಂಶಾದಿರೂಪಕೇ ।
ಸಾರ ಶುಭಪ್ರವಿಷ್ಟನಂದ ಸ್ಥೂಲ ನಿಸ್ಸಾರ ॥
ಆರು ರಸಗಳನರ್ಪಿಸಲ್ಹರಿಗೀ ರಹಸ್ಯವ ಪೇಳದೆ ಸದಾ ।
ಪಾರಮಹಿಮನ ರೂಪಗುಣಗಳ ನೆನೆದು ಸುಖಿಸುತಿರು ॥ ॥೧೩-೨೬॥

ಜಲಗತೋಡುಪನಮಲ ಬಿಂಬವ । ಮೆಲುವವೆಂಬತಿ ಹರುಷದಿಂದಲಿ ।
ಜಲಚರಪ್ರಾಣಿಗಳು ನಿತ್ಯದಿ ಯತ್ನಗೈವಂತೆ ॥
ಹಲಧರಾನುಜ ಭೋಗ್ಯರಸಗಳ । ನೆಲೆಯನರಿಯದೆ ಪೂಜಿಸುತ ಹಂ।
ಬಲಿಸುವರು ಪುರುಷಾರ್ಥಗಳ ಸತ್ಕುಲಜರಾವೆಂದು ॥ ||೧೩-೨೮||

ದೇವ ಋಷಿ ಗಂಧರ್ವ ಪಿತೃ ನರ।ದೇವಮಾನವ ದನುಜ ಗೋಜ ಖ ।
ರಾಪಿ ಮೊದಲಾದಖಿಳಚೇತನಭೋಗ್ಯರಸಗಳನು ॥
ಯಾವದವಯವಗಳೊಳಗಿದ್ದು ರ।ಮಾವರನು ಸ್ವೀಕರಿಪ ಯಾವ ।
ಜ್ಜೀವಗಣಕೆ ಸ್ವಯೋಗ್ಯರಸಗಳ ನೀವನೆಂದೆಂದು ॥ ||೧೩-೨೯||

ಒರಟುಬುದ್ಧಿಯ ಬಿಟ್ಟು ಲೌಕಿಕ । ಹರಟೆಗಳನೀಡಾಡಿ ಕಾಂಚನ ।
ಪರಟಿಲೋಷ್ಟಾದಿಗಳು ಸಮವೆಂದರಿದು ನಿತ್ಯದಲಿ ॥
ಪುರಟಗರ್ಭಾಂಡೋದರನು ಸ।ತ್ಪುರುಟನೆಂದೆನಿಸಿಲ್ಗರೊಳಿ ।
ದ್ದುರುಟುಕರ್ಮವಮಾಳ್ಪನೆಂದಡಿಗಡಿಗೆ ನೆನೆವುತಿರು ॥ ||೧೩-೩೦||

ಭೂತಳದಿ ಜನರುಗಳು ಮರ್ಮಕ । ಮಾತುಗಳನಾಡಿದರೆ ಸಹಿಸದೆ ।
ಘಾತಿಸುವರತಿಕೋಪದಿಂದಲಿ ಎಚ್ಚರಿಪ ತೆರದಿ ।
ಮಾತುಳಾಂತಕ ಜಾರ ಹೇ ನವ।ನೀತಚೋರನೆ ಎನಲು ತನ್ನ ನಿ ।
ಕೇತನದೊಳಿಟ್ಟವರ ಸಂತೈಸುವನು ಕರುಣಾಳು ॥ ||೧೩-೩೧||

ಹರಿ ಕಥಾಮೃತಸಾರವಿದು ಸಂ।ತರು ಸದಾ ಚಿತ್ತೈಸುವದು ನಿ ।
ಷ್ಠುರಿಗಳಿಗೆ ಪಿಶುನರಿಗಯೋಗ್ಯರಿಗಿದನು ಪೇಳದಲಿ ॥
ನಿರುತ ಸದ್ಭಕ್ತಿಯಲಿ ಭಗವ।ಚ್ಚರಿತಗಳ ಕೊಂಡಾಡಿ ಹಿಗ್ಗುವ ।
ಪರಮ ಭಗವದ್ದಾಸರಿಗೆ ತಿಳಿಸುವುದು ಈ ರಹಸ್ಯ ॥ ||೧೩-೩೨||

ಸತ್ಯಸಂಕಲ್ಪನು ಸದಾ ಪ।ನಿತ್ತುದೇ ಪುರುಷಾರ್ಥವೆಂದರಿ ।
ದತ್ಯಧಿಕ ಸಂತೋಷದಲಿ ನೆನೆವುತ್ತ ಭುಂಜಿಪುದು ॥
ನಿತ್ಯಸುಖಸಂಪೂರ್ಣ ಪರಮ ಸು।ಹೃತ್ತಮ ಜಗನ್ನಾಥವಿಠಲ ।
ಬತ್ತಿಸಿ ಭವಾಂಬುಧಿಯ ಚಿತ್ಸುಖವ್ಯಕ್ತಿ ಕೊಡುತಿಪ್ಪ ॥ ||೧೩-೩೩||

ooooooooooooooooooooooooooooooooooooo